1	2	3
90.	ಕಿಪ್ರಾಶಾ, ಬಿದಲೋಟ	3
91.	ಕಿಪ್ರಾಶಾ, ಕಲಿಗೋನಹಳ್ಳಿ	1
92.	ಹಿಪ್ರಾಶಾ, ಕರಕಲಘಟ್ಟ	1
93.	ಹಿಪ್ರಾಶಾ, ಚಿಲಗೋನಹಳ್ಳಿ	1
94.	ಹಿಪ್ರಾಶಾ, ಬುರುಗನಹಳ್ಳಿ	1
95.	ಹಿಪ್ರಾಶಾ, ಹುಲಿಕುಂಟೆ	1
96.	ಕಿಪ್ರಾಶಾ, ಯಾದಗೆರೆ	1
97.	ಕಿಪ್ರಾಶಾ, ಹುಲೀಕುಂಟೆ (ಉರ್ದು)	1
98.	ಕಿಪ್ರಾಶಾ, ಚಿಕ್ಕಣ್ಣನ ಪಾಳ್ಯ	1
99.	ಕಿಪ್ರಾಶಾ, ಮಲಗೋನಹಳ್ಳಿ	1
100.	ಕಿಪ್ರಾಶಾ, ಗಂಟಗಾನಹಳ್ಳಿ	2
101.	ಕಿಪ್ರಾಶಾ, ದೇವರಹಳ್ಳಿ	1
	ಒಟ್ಟು	139 ಕೊಠಡಿಗಳು

ಕೊರಟಗೆರೆ ತಾಲ್ಲೂಕಿನಲ್ಲಿ ಆಶ್ರಯ ಮನೆಗಳ ಹಂಚಿಕೆ

235 (418) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) - ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊರಟಗೆರೆ ಕ್ಷೇತ್ರದಾದ್ಯಂತ ಆಶ್ರಯ ಮನೆಗಳ ಹಂಚಿಕೆಗಾಗಿ ಬಂದಿರುವ ಫಲಾನುಭವಿಗಳ ಅರ್ಜಿಗಳ ಸಂಖ್ಯೆ ಎಷ್ಟು ;

ಆ) 2002-2003ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಮಂಜೂರಾದ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಮನೆಗಳ ಸಂಖ್ಯೆ ಎಷ್ಟು ; ಯಾವ ಯಾವ ಬಡ ಫಲಾನುಭವಿಗಳಿಗೆ ಮನೆಗಳನ್ನು ಹಂಚಿಕೆ ಮಾಡಲಾಗಿದೆ ; (ವಿವರ ಒದಗಿಸುವುದು) .

ಇ) 2002-2003ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಮನೆಗಳ ಮಂಜೂರಿಯಲ್ಲಿ ತೀವ್ರ ರೀತಿಯಲ್ಲಿ ಕೊರಟಗೆರೆ ಕ್ಷೇತ್ರಕ್ಕೆ ತಾರತಮ್ಯತೆಯನ್ನು ಅನುಸರಿಸಿರುವುದು ನಿಜವಲ್ಲವೇ ; ಇದನ್ನು ನಿವಾರಿಸಲು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು)

ಅ) 2002-03ನೇ ಸಾಲಿನಲ್ಲಿ 13,729 ಅರ್ಜಿಗಳು ಬಂದಿರುತ್ತವೆ.

ಆ) 2002-03ನೇ ಸಾಲಿನಲ್ಲಿ ಕೊರಟಗೆರೆ ಕ್ಷೇತ್ರಕ್ಕೆ ಈ ಕೆಳಗಿನಂತೆ ಮನೆಗಳನ್ನು ಮಂಜೂರು ಮಾಡಲಾಗಿದೆ.

ಕ್ರಮ ಸಂಖ್ಯೆ	ಯೋಜನೆ	ಮಂಜೂರಾದ ಮನೆಗಳು
1	ಗ್ರಾಮೀಣ ಆಶ್ರಯ	590
2	ನವಗ್ರಾಮ ಆಶ್ರಯ ಯೋಜನೆ	240
3	ಗ್ರಾಮೀಣ ಅಂಬೇಡ್ಕರ್	41
	ಒಟ್ಟು	871

ಇ) ಇಲ್ಲ

ಉದ್ಭವಿಸುವುದಿಲ್ಲ.

ಚಿಂತಾಮಣಿ ವಿಧಾನ ಸಭಾ ಕ್ಷೇತ್ರದಲ್ಲಿ ಕೊಳವೆ ನೀರು ಸರಬರಾಜು ಯೋಜನೆ ಅನುಷ್ಠಾನ

236 (260) ಶ್ರೀ ಚೌಡರೆಡ್ಡಿ (ಚಿಂತಾಮಣಿ) - ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಚೀಳೂರು ಹೋಬಳಿ ರಾಶ್ಚೆರುವು ಪಂಚಾಯ್ತಿಯ ಕದಿರನ್ನಗಾರಿ ಕೋಟೆ ಗ್ರಾಮಕ್ಕೆ ಕೊಳವೆ ನೀರು ಸರಬರಾಜು ಯೋಜನೆ ಮಂಜೂರು ಆಗಿರುವುದು ನಿಜವೇ ;

ಆ) ಈ ಯೋಜನೆ ಅಡಿಯಲ್ಲಿ ಮೇಲು ನೀರು ಶೇಖರಣಾ ತೊಟ್ಟಿಯ (ಓವರ್ ಹೆಡ್ ಟ್ಯಾಂಕ್) ಕಾಮಗಾರಿಯನ್ನು ಮುಗಿಸಿ ಎಷ್ಟು ದಿನಗಳಾಗಿವೆ ;

ಇ) ಈ ಓವರ್ ಹೆಡ್ ಟ್ಯಾಂಕ್‌ನಿಂದ ಗ್ರಾಮಕ್ಕೆ ನೀರು ಸರಬರಾಜು ಮಾಡದೇ ಇರುವುದರಿಂದ ಗ್ರಾಮಸ್ಥರಿಗೆ ತೊಂದರೆಯಾಗಿದ್ದು, ಮತ್ತು ಟ್ಯಾಂಕ್ ಕಟ್ಟಿದ ಮೇಲೆ ಟ್ಯಾಂಕಿಗೆ ನೀರು ಬಿಡದೆ ಆ ಟ್ಯಾಂಕ್ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

ಅ) ಹೌದು

ಆ) ಈ ಯೋಜನೆಯಡಿ ಓವರ್‌ಹೆಡ್ ಬ್ಯಾಂಕ್ ಕಾಮಗಾರಿಯನ್ನು ಪೂರ್ಣಗೊಳಿಸಿ ಒಂದು ವರ್ಷವಾಗಿದೆ.

ಇ) ಈ ಯೋಜನೆಗಾಗಿ ಕೊರೆಯಲಾಗಿದ್ದ ಕೊಳವೆ ಬಾವಿ ಜಲಮೂಲ ಬತ್ತಿಹೋಗಿದ್ದು, ಮತ್ತೊಂದು ಕೊಳವೆ ಬಾವಿಯನ್ನು ಕೊರೆಯಲಾಗಿದ್ದು, ಪೈಪುಲೈನ್ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದೆ. ನೀರಿನ ಮೇಲ್ತೊಟ್ಟಿ ಸಂಗ್ರಹಾಲಯ ಸುಸ್ಥಿತಿಯಲ್ಲಿದ್ದು ಮಾರ್ಚ್ 2003ರ ಅಂತ್ಯದೊಳಗಾಗಿ ಕುಡಿಯುವ ನೀರು ಪೂರೈಕೆಯಾಗುತ್ತದೆ.

ಚಿಂತಾಮಣಿ ವಿಧಾನ ಸಭಾ ಕ್ಷೇತ್ರದಲ್ಲಿ ಹೆಚ್ಚಿನ ಅಂಶದ ಫ್ಲೋರೈಡ್ ಮಿಶ್ರಿತ ನೀರು

237 (263) ಶ್ರೀ ಚೌಡರೆಡ್ಡಿ (ಚಿಂತಾಮಣಿ) - ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?